**ಸಾಕ್ಷಿಯನ್ನು ದಿಃ 11.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಎದುರುದಾರರ ಪರ ಶ್ರೀ ಡಿ ಕೆ ವಿ ವಕೀಲರಿಂದಃ**

ನಾನು 2 ರಿಂದ 4ನೇ ಎದುರುದಾರರೊಂದಿಗೆ ಚನ್ನಾಗಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಫ್ ಡಿ ಪಿ ಯಲ್ಲಿ ಸಮನ್ಸ್ ಬಂದಾಗ ಅಸಲು ದಾವೆ ಹೂಡಿರುವ ಬಗ್ಗೆ ತಿಳಿಯಿತು. ಅಸಲು ದಾವೆಯ ದಾಖಲೆಗಳನ್ನು ವಕೀಲರ ಮೂಲಕ ಕಲೆ ಹಾಕಿದ್ದೇನೆ. 3ನೇ ಎದುರುದಾರರು ದಾಖಲೆಗಳನ್ನು ನನಗೆ ನ್ಯಾಯಾಲಯದಿಂದ ತೆಗೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವೆಯಲ್ಲಿ ನಮೂದಿಸಿರುವ ದಾವಾ ಸ್ವತ್ತುಗಳೆಲ್ಲವೂ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಜವರೇಗೌಡರ ಸ್ವಯಾರ್ಜಿತ ಸ್ವತ್ತುಗಳು ಎಂದು ತೋರಿಸಲು ನನ್ನ ಬಳಿ ದಾಖಲೆ ಇವೆ. ನಾನು ಸ್ವಂತ ಊರಿಗೆ ಆಗಾಗ ಬರುತ್ತೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರ ಅಸಲು ದಾವೆ ಹೂಡಿದದ ಬಗ್ಗೆ ನನಗೆ ಗೊತ್ತಿದ್ದರು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರಿಗೆ ಆಸ್ತಿಯಲ್ಲಿ ಭಾಗ ನೀಡಬಾರದು ಹಾಗೂ ತಡವಾಗಿ ತೆಗೆದುಕೊಳ್ಳಲಿ ಎಂಬ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು 2 ರಿಂದ 4ನೇ ಎದುರುದಾರರೊಂದಿಗೆ ಷರೀಕಾಗಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1ನೇ ಎದರುದಾರರಿಗೆ ಆಸ್ತಿಯಲ್ಲಿ ಭಾಗ ಕೊಡಬಾರದು ಎಂಬ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ನಾವು 4 ಜನ ಮಕ್ಕಳು ಎಂದರೆ ಸರಿ.

**ಮುಂದುವರೆದ ಮುಖ್ಯ ವಿಚಾರಣೆಃ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಶ್ರೀಮತಿ ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**